**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 11 ಬಿಪಿಇ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:13–10–2017.

**ಸುತ್ತೋಲೆ**

ವಿಷಯ:– 2018–19ನೇ ಸಾಲಿನ ಅನುಬಂಧ–ಬಿ–ವೇತನಗಳ ಅಂದಾಜುಗಳು

********

**1. ಅಂದಾಜಿಸುವ ವಿಧಾನ:**

(ಅ) 2015–16ನೇ ಸಾಲಿನಿಂದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯ (HRMS) ಮೂಲಕ ಕಾರ್ಯನಿರತ ಸಂಖ್ಯಾ ಬಲದ ವಿವರಗಳನ್ನು ಪಡೆದುಕೊಂಡು ಅಪೆಂಡಿಕ್ಸ್–ಬಿ ಗಾಗಿ ವೇತನದ ಅಂದಾಜುಗಳನ್ನು ಮಾಡಲಾಗುತ್ತಿದೆ. ಆದಾಗ್ಯೂ, HRMSನ ಸುಧಾರಿತ ಆವೃತ್ತಿಯ ಮಾದರಿಯನ್ನು (Organogram Module) ಬಳಸಿ ಪಡೆಯಲಾದ ಮಂಜೂರಾದ ಹುದ್ದೆಗಳ ಮಾಹಿತಿಯನ್ನು ಕಳೆದ ಎರಡು ಆರ್ಥಿಕ ವರ್ಷದಿಂದ ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಂದ ಪಡೆದುಕೊಳ್ಳಲಾಗುತ್ತಿದೆ.

(ಬ) ಆರ್ಥಿಕ ವರ್ಷ 2018–19ನೇ ಸಾಲಿನಲ್ಲಿಯೂ ಅನುಬಂಧ–ಬಿ ವೇತನಗಳನ್ನು ಅಂದಾಜು ಮಾಡಲು ಆರ್ಥಿಕ ಇಲಾಖೆಯು ಸುಧಾರಿತ ಆವೃತ್ತಿಯ ಮಾದರಿ (Organogram Module)ಯ ಮೂಲಕ ಮಂಜೂರಾದ ಹುದ್ದೆಗಳ ಅಂಕಿ ಅಂಶಗಳನ್ನು ಬಳಸಿಕೊಳ್ಳುತ್ತದೆ ಮತ್ತು ಹಿಂದಿನಂತೆ ಯಾವುದೇ ಸಿದ್ಧಪಡಿಸಿದ ಮಾಹಿತಿಯನ್ನು ಭೌತಿಕವಾಗಿ (manually) ಇಲಾಖೆಗಳಿಂದ ಸ್ವೀಕರಿಸಲಾಗುವುದಿಲ್ಲ. ಆದ್ದರಿಂದ, ಇಲಾಖಾ ಮುಖ್ಯಸ್ಥರು ಒದಗಿಸುವ ಮಾಹಿತಿಯಲ್ಲಿ ಯಾವುದೇ ಲೋಪವಿದ್ದಲ್ಲಿ ಅಥವಾ ವ್ಯತ್ಯಾಸಗಳಿದ್ದಲ್ಲಿ ವೇತನಗಳಡಿ ಕಡಿಮೆ ಅನುದಾನ ನಿಗದಿಯಾಗುವಲ್ಲಿ ಪರಿಣಮಿಸುತ್ತದೆ.

**2. ಆಡಳಿತ ಇಲಾಖೆಗಳ ಪಾತ್ರ:**

(ಎ) ಆಯವ್ಯಯ ಅಂದಾಜು ಅಧಿಕಾರಿಗಳು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ಮಂಜೂರಾದ ಸಂಖ್ಯಾ ಬಲದ ವಿವರಗಳ ಮಾಹಿತಿಯನ್ನು ಕಡ್ಡಾಯವಾಗಿ Update ಮಾಡತಕ್ಕದ್ದು.

(ಬಿ) URL 'hrmsorg' ಯಲ್ಲಿ ದಾಖಲಾಗಲು ಅಂತರ್ಜಾಲ ಬ್ರೌಸರ್‌ನ್ನು ಬಳಸಿ ಸಂಬಂದಪಟ್ಟ ಇಲಾಖೆಗಳಿಗೆ ಈಗಾಗಲೇ ಒದಗಿಸಲಾಗಿರುವ ಇಲಾಖಾ ಮುಖ್ಯಸ್ಥರುಗಳ ಪರಿಚಯ ಪತ್ರದ (Credentials) ಮೂಲಕ ಲಾಗಿನ್ ಆಗುವುದು. ಲಾಗಿನ್ ಯಶಸ್ವಿಯಾದ ನಂತರ ಸಂಬಂಧಪಟ್ಟ ಇಲಾಖೆಯ ಹೆಸರು ಪುಟದ ಮೇಲ್ಬಾಗದಲ್ಲಿ ಪ್ರಕಟಗೊಳ್ಳುತ್ತದೆ. ಇಲಾಖೆಯನ್ನು ಆಯ್ಕೆ ಮಾಡಿದ ನಂತರ, ಇಲಾಖೆಗಳು 2017–18ನೇ ಸಾಲಿನಲ್ಲಿ ದಾಖಲಿಸಿದ ಪ್ರಕಾರ ವೇತನ ಶ್ರೇಣಿವಾರು ಮಂಜೂರಾದ ಸಂಖ್ಯಾ ಬಲದ ವಿವರಗಳು ಪರದೆಯ ಮೇಲೆ ಪ್ರಕಟಗೊಳ್ಳುತ್ತದೆ.

(ಸಿ) ಆನಂತರ, ಒದಗಿಸಿರುವ ಮಂಜೂರಾದ ಸಂಖ್ಯಾ ಬಲದ ವಿವರಗಳು ಸರಿ ಇದೆಯೇ ಎಂದು ಪರಿಶೀಲಿಸಿ, ಈ ವಿವರಗಳು ಸರಿಯಿದ್ದಲ್ಲಿ, ಇಲಾಖಾ ಮುಖ್ಯಸ್ಥರು ಸಹಿ ಮಾಡಿದ ದೃಢೀಕರಣ ಪತ್ರವನ್ನು ಆರ್ಥಿಕ ವರ್ಷ 2018–19ರ ಅನುಬಂಧ–ಬಿ ಅಂದಾಜುಗಳನ್ನು ತಯಾರಿಸಲು ಆಯವ್ಯಯ ಅಂದಾಜು ಅಧಿಕಾರಿಗಳು ಉಪಯೋಗಿಸಿಕೊಳ್ಳುವ ಸಲುವಾಗಿ, ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

(ಡಿ) ಹುದ್ದೆಗಳ ಸೃಜನೆ/ರದ್ದತಿ/ಉನ್ನತೀಕರಣ/ನಿಮ್ನೀಕರಣ/ಸ್ಥಳಾಂತರ ಮುಂತಾದ ಕಾರಣಗಳಿಂದ ಒದಗಿಸಲಾದ ಅಂಕಿ–ಅಂಶಗಳಲ್ಲಿ ಯಾವುದಾದರು ಬದಲಾವಣೆಯಿದ್ದಲ್ಲಿ ಪೋರ್ಟಲ್‌ನಲ್ಲಿ ಸೂಕ್ತವಾಗಿ ಮಾರ್ಪಡಿಸಿ, ಆ ನಂತರ ಈ ಬದಲಾವಣೆಗಳ ಬಗ್ಗೆ ಇಲಾಖಾ ಮುಖ್ಯಸ್ಥರು ದೃಢೀಕರಿಸಿ, ಸಹಿ ಮಾಡಿದ ಧೃಢೀಕರಣ ಪತ್ರವನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

(ಇ) ಎಲ್ಲಾ ಬಾಬ್ತುಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿರುವ ಅಂಕಿ–ಅಂಶಗಳು ಸಂಪೂರ್ಣವಾಗಿವೆಯೆಂದು ಮನವರಿಕೆಯಾದಲ್ಲಿ ಮತ್ತು ದಾಖಲಿಸಿರುವ ಅಂಕಿ–ಅಂಶಗಳನ್ನು ಪರಿಶೀಲಿಸಿ ತೃಪ್ತಿಕರವೆಂದು ಕಂಡುಬಂದ ನಂತರ ಇಲಾಖಾ ಮುಖ್ಯಸ್ಥರುಗಳು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಿಂದ ಧೃಢೀಕರಣ ಪತ್ರವನ್ನು ಪಡೆದು ಮೇಲೆ ತಿಳಿಸಿರುವ ವಿಧಾನದಂತೆ ತಮ್ಮ ಸಹಿಯೊಂದಿಗೆ ಆರ್ಥಿಕ ಇಲಾಖೆಗೆ ಕಳುಹಿಸಿಕೊಡತಕ್ಕದ್ದು. 2018–19ನೇ ಸಾಲಿಗೆ ಹುದ್ದೆಗಳು ಮತ್ತು ವೇತನಗಳಿಗೆ ಸಂಬಂಧಿಸಿದಂತೆ ಅಂದಾಜುಗಳನ್ನು/ವಿಶ್ಲೇಷಣೆಗಳನ್ನು ಮಾಡಲು HRMS ಮೂಲಕ ಪಡೆಯಲಾಗುವ ಸಹಿಯಾಗಿರುವ ವರದಿಯನ್ನೆ ಅಧಿಕೃತವೆಂದು ಪರಿಗಣಿಸಿ ಸ್ವೀಕರಿಸಲಾಗುವುದು ಮತ್ತು ಅಂತಹ ವರದಿಯನ್ನು ಮಾತ್ರ ಆರ್ಥಿಕ ಇಲಾಖೆಯಲ್ಲಿ ಬಳಸಲಾಗುವುದು. ಧೃಢೀಕರಣ ಪತ್ರವನ್ನು ಸಲ್ಲಿಸಲು **30–11–2017** ಅಂತಿಮ ದಿನಾಂಕವಾಗಿರುತ್ತದೆ.

(ಎಫ್) ರಾಜ್ಯ ಮತ್ತು ಜಿಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ದಾಖಲಿಸಿರುವ ಎಲ್ಲಾ ಅಂಕಿ-ಅಂಶಗಳು ಪೂರ್ಣ ಪ್ರಮಾಣದಲ್ಲಿ ಮತ್ತು ನಿಖರವಾಗಿರುವುದನ್ನು ನೋಡಿಕೊಳ್ಳುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರುಗಳದಾಗಿರುತ್ತದೆ. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ಸಹಯೋಗದೊಂದಿಗೆ ಅಂಕಿ-ಅಂಶಗಳನ್ನು ಜಿಲ್ಲಾ ಪಂಚಾಯತ್‌ಗಳಿಂದ ಸಂಗ್ರಹಿಸಿ, ಕ್ರೋಢೀಕರಿಸುವ ಹಾಗೂ ಪ್ರತಿ ಇಲಾಖೆಯಲ್ಲಿ HRMS ಗಾಗಿ ನೇಮಕಗೊಂಡಿರುವ ನೋಡಲ್ ಅಧಿಕಾರಿಯ ಸಹಾಯದೊಂದಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಕ್ರಮಗಳ (Scheme) ಬಗ್ಗೆ ಅಂಕಿ-ಅಂಶಗಳನ್ನು ದಾಖಲಿಸುವ ಕಾರ್ಯವನ್ನು ಪೂರ್ಣಗೊಳಿಸುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರುಗಳದ್ದಾಗಿರುತ್ತದೆ.

(ಜಿ) 2018-19ನೇ ಸಾಲಿನ ವೇತನಗಳನ್ನು ಅಂದಾಜುಗೊಳಿಸುವಲ್ಲಿ ಆರ್ಥಿಕ ಇಲಾಖೆಯು ಸಂಪೂರ್ಣವಾಗಿ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಡಿ ದಾಖಲಿಸಿರುವ ಅಂಕಿ-ಅಂಶಗಳನ್ನು ಅವಲಂಬಿಸುವುದರಿಂದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ಅಂಕಿ-ಅಂಶಗಳನ್ನು ದಾಖಲಿಸುವ ಸಂದರ್ಭದಲ್ಲಿ ಮತ್ತು ಅವುಗಳ ಪರಿಶೀಲನೆಯ ವೇಳೆಯಲ್ಲಿ ಅತ್ಯಂತ ಜಾಗರೂಕತೆ ಮತ್ತು ಎಚ್ಚರ ವಹಿಸತಕ್ಕದ್ದು.

(ಹೆಚ್) 2017-18ನೇ ಸಾಲಿನಲ್ಲಿ HRMSನಲ್ಲಿ ಸೇರಿರದ ಯೋಜನೆಗಳ ಪಟ್ಟಿಯನ್ನು **ಅನುಬಂಧ-1ರಲ್ಲಿ** ಒದಗಿಸಿದೆ. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳೆಲ್ಲವೂ HRMS ವ್ಯವಸ್ಥೆಯಡಿ ಬಂದಿರುವುದನ್ನು **ದಿನಾಂಕ:30-11-2017ರೊಳಗೆ ಖಚಿತಪಡಿಸಿಕೊಳ್ಳತಕ್ಕದ್ದು.**

(ಐ) ಗುತ್ತಿಗೆ ಆಧಾರದ ಮತ್ತು ದಿನಗೂಲಿ ನೌಕರರುಗಳನ್ನು HRMSನಲ್ಲಿ ದಾಖಲಿಸದಂತೆ ಇಲಾಖೆಗಳು ಖಚಿತಪಡಿಸಿಕೊಳ್ಳತಕ್ಕದ್ದು. ಗುತ್ತಿಗೆ/ಹೊರಗುತ್ತಿಗೆ ನೌಕರುಗಳಿಗಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ-034 ರಡಿಯಲ್ಲಿ, ದಿನಗೂಲಿ ನೌಕರರುಗಳಿಗಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ-033 ರಡಿಯಲ್ಲಿ ಹಾಗೂ ಸಹಾಯಾನುದಾನ ಸಂಸ್ಥೆಗಳಲ್ಲಿನ ಹೊರಗುತ್ತಿಗೆ ನೌಕರರುಗಳಿಗಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ-115 ರಡಿ ಪ್ರತ್ಯೇಕ ಅಂದಾಜುಗಳನ್ನು ಸಂಬಂಧಪಟ್ಟ ಇಲಾಖೆಗಳು ವೆಚ್ಚದ ಅಂದಾಜುಗಳನ್ನು ಸಲ್ಲಿಸುವಾಗ ಕಳುಹಿಸತಕ್ಕದ್ದು.

**3. ಆರ್ಥಿಕ ಇಲಾಖೆ ಮತ್ತು ಹೆಚ್.ಆರ್.ಎಂ.ಎಸ್.ನ ಪಾತ್ರ**

**ಅ) ಆರ್ಥಿಕ ಇಲಾಖೆಯು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಿಂದ ನೇರವಾಗಿ ಅಂಕಿ– ಅಂಶಗಳನ್ನು ಪಡೆದುಕೊಳ್ಳುತ್ತದೆ (port).**

ಬ) ಅಂಕಿ–ಅಂಶಗಳನ್ನು ದಾಖಲಿಸುವಾಗ ಅಥವಾ ನಂತರದ ಹಂತದಲ್ಲಿ ಎದುರಾಗಬಹುದಾದ ಯಾವುದಾದರೂ ಪ್ರಾಯೋಗಿಕ/ತಾಂತ್ರಿಕ ಸಮಸ್ಯೆಗಳನ್ನು ಕಾಲವಿಳಂಬ ಮಾಡದೇ ತಕ್ಷಣವೇ ಯೋಜನಾ ಅಧಿಕಾರಿ, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ ಇವರ ಗಮನಕ್ಕೆ ತರತಕ್ಕದ್ದು, ಇವರನ್ನು ದೂರವಾಣಿ ಸಂಖ್ಯೆ 080–22372410 ಮತ್ತು **ಮಿಂಚಂಚೆ:** pohrms-ceg@karnataka.gov.in ರಲ್ಲಿ ಸಂಪರ್ಕಿಸಬಹುದಾಗಿದೆ. ಈ ವಿಷಯವನ್ನು **ಮಿಂಚಂಚೆ:** **spobud-fd@karnataka.gov.in** ಮೂಲಕ ವಿಶೇಷಾಧಿಕಾರಿ (ಆಯವ್ಯಯ) ಆರ್ಥಿಕ ಇಲಾಖೆ ರವರ ಗಮನಕ್ಕೂ ತರತಕ್ಕದ್ದು.

**4. ನೇಮಕಾತಿ ಆಧಾರದ ಮೇಲೆ ಹುದ್ದೆಗಳ ಅಗತ್ಯತೆಯನ್ನು ಅಂದಾಜಿಸುವ ವಿಧಾನ:**

ಕೆಲವು ಇಲಾಖೆಗಳು ಈಗಾಗಲೇ ಮಾಡಿರುವ ನೇಮಕಾತಿ ಹಾಗೂ ಮಾಡಲಾಗುತ್ತಿರುವ ನೇಮಕಾತಿ ಆಧಾರದ ಮೇಲೆ ಖಾಲಿ ಹುದ್ದೆಗಳು 2018–19ರಲ್ಲಿ ಭರ್ತಿಯಾಗುವ ಸಾಧ್ಯತೆ ಇರುತ್ತದೆ. 2018–19ನೇ ಸಾಲಿನಲ್ಲಿ ಕಾರ್ಯನಿರತ ಹುದ್ದೆಗಳ ಹೆಚ್ಚಳವು ಆರ್ಥಿಕ ಪರಿಣಾಮ ಬಿರುವುದರಿಂದ 2018–19ನೇ ಸಾಲಿನಲ್ಲಿ ಭರ್ತಿಯಾಗುವ ಹುದ್ದೆಗಳನ್ನು ಇಲಾಖಾ ಮುಖ್ಯಸ್ಥರುಗಳು ಮುಂದಾಲೋಚಿಸಿ ದಿನಾಂಕ:30–12–2017 ರೊಳಗಾಗಿ ಆರ್ಥಿಕ ಇಲಾಖೆಗೆ ಅನುಬಂಧ–2ರಂತೆ ಮಾಹಿತಿಯನ್ನು ಒದಗಿಸಬೇಕು.

5. ಈ ಸುತ್ತೋಲೆಯನ್ನು ಅದರ ಅನುಬಂಧಗಳೊಂದಿಗೆ ಆರ್ಥಿಕ ಇಲಾಖೆಯ ವೆಬ್‌ವಿಳಾಸ www.finance.kar.nic.in ನಿಂದ ಪಡೆಯಬಹುದಾಗಿದೆ.

**(ರಿತ್ವಿಕ್ ಪಾಂಡೆ)**
ಸರ್ಕಾರದ ಕಾರ್ಯದರ್ಶಿ(ಆ & ಸಂ)
ಆರ್ಥಿಕ ಇಲಾಖೆ.

**ಇವರಿಗೆ:–**

(1)ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), (ಜಿ ಮತ್ತು ಎಸ್‌ಎಸ್‌ಎ), (ಇ ಮತ್ತು ಆರ್‌ಎಸ್‌ಎ) ಕರ್ನಾಟಕ, ಬೆಂಗಳೂರು–1
(2)ಸರ್ಕಾರದ ಎಲ್ಲಾ ಪಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
(3)ಎಲ್ಲಾ ಪಾದೇಶಿಕ ಆಯುಕ್ತರುಗಳು.
(4)ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

(5)ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

(6)ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

(7)ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

(8)ಆರ್ಥಿಕ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.

(9)ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.

# ಅನುಬಂಧ-1

**2017-18ನೇ ಸಾಲಿನಲ್ಲಿ ಹೆಚ್ ಆರ್ ಎಮ್ ಎಸ್ ನಿಂದ ಹೊರಗುಳಿದ ಯೋಜನೆಗಳು**

| ವಲಯ | ಬೇಡಿಕೆ | ಲೆಕ್ಕ ಶೀರ್ಷಿಕೆ | ವಿವರ |
|---|---|---|---|
| ರಾಜ್ಯ | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2014-00-102-0-01 | ನ್ಯಾಯಾಧೀಶರು |
| ರಾಜ್ಯ | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2014-00-116-2-00 | ಕೆಎಟಿ – ಕಲಬುರಗಿ |
| ರಾಜ್ಯ | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2014-00-116-3-00 | ಕೆಎಟಿ – ಬೆಳಗಾವಿ |
| ರಾಜ್ಯ | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2051-00-102-0-01 | ಅಧ್ಯಕ್ಷರು ಮತ್ತು ಸದಸ್ಯರು |
| ರಾಜ್ಯ | ಕಂದಾಯ | 2053-00-093-1-07 | ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ 2011 ರಡಿ ಸ್ಥಾಪಿತವಾದ ವಿಶೇಷ ನ್ಯಾಯಾಲಯ |
| ರಾಜ್ಯ | ಕೃಷಿ ಮತ್ತು ತೋಟಗಾರಿಕೆ | 2401-00-114-0-01 | ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆ ಅಭಿಯಾನ |
| ರಾಜ್ಯ | ಕಂದಾಯ | 2506-00-012-0-03 | ಯು ಪಿ ಒ ಆರ್ ಯೋಜನೆಗಳು |
| ಜಿಲ್ಲೆ | ಸಮಾಜ ಕಲ್ಯಾಣ | 2225-00-101-0-82 | ಶಿಕ್ಷಣ ಇಲಾಖೆಯಿಂದ ವರ್ಗಾಯಿಸಲ್ಪಟ್ಟ ವಸತಿ ಶಾಲೆಗಳು |
| ಜಿಲ್ಲೆ | ಸಮಾಜ ಕಲ್ಯಾಣ | 2225-00-103-0-53 | ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ |
| ಜಿಲ್ಲೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 2235-00-101-0-28 | ಅಂಗವಿಕಲರಿಗಾಗಿ ಸರ್ಕಾರೇತರ ಸೇವಾಸಂಸ್ಥೆಗಳು |
| ಜಿಲ್ಲೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 2235-00-101-0-30 | ವೃದ್ಧರ, ವಿಕಲಾಂಗರ ಮತ್ತು ರೋಗಗ್ರಸ್ತರ ಪಾಲನೆಗಾಗಿ ಸ್ವಯಂ ಸೇವಾ ಸಂಸ್ಥೆಗಳು |
| ಜಿಲ್ಲೆ | ಪಶುಸಂಗೋಪನೆ ಮತ್ತು ಮೀನುಗಾರಿಕೆ | 2405-00-101-0-28 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ |
| ಜಿಲ್ಲೆ | ಜಲ ಸಂಪನ್ಮೂಲ | 2702-00-101-0-27 | ಸಮೀಕ್ಷೆ |

# ಅನುಬಂಧ–2

## (ಉದಾಹರಣೆಯೊಂದಿಗೆ)

| ಕ್ರ.ಸಂ. | ಸೇವೆಗೆ ಸೇರುವ ತಿಂಗಳು | ಸಂಬಳ ಸೆಳೆಯಲಾಗುವ ಲೆಕ್ಕಶೀರ್ಷಿಕೆ | ಅಧಿಕಾರಿಗಳ ಪದನಾಮ | ಸಂಖ್ಯೆ | ವೇತನಶ್ರೇಣಿ (ಕನಿಷ್ಠ–ಗರಿಷ್ಠ) | ಮೂಲವೇತನ | ಹೆಚ್‌ಆರ್‌ಎ | ಸಿಸಿಎ | ಇತರೆ ಭತ್ಯೆಗಳು (ತುಟ್ಟಿಭತ್ಯೆ ಹೊರತುಪಡಿಸಿ) | ಒಟ್ಟು |
|---|---|---|---|---|---|---|---|---|---|---|
| 1 | ಮೇ 2018 | | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | 5 | 20000–36300 | 100000 | 30000 | 2000 | 2000 | 134000 |
| 2 | ಮೇ 2018 | | ಕೃಷಿ ಅಧಿಕಾರಿ | 10 | 19000–34500 | 190000 | 57000 | 2000 | 5000 | 254000 |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |

| ಕ್ರ.ಸಂ. | ಸೇವೆಗೆ ಸೇರುವ ತಿಂಗಳು | ಸಂಬಳ ಸೆಳೆಯಲಾಗುವ ಲೆಕ್ಕಶೀರ್ಷಿಕೆ | ಸಿಬ್ಬಂದಿಗಳ ಪದನಾಮ | ಸಂಖ್ಯೆ | ವೇತನಶ್ರೇಣಿ (ಕನಿಷ್ಠ–ಗರಿಷ್ಠ) | ಮೂಲವೇತನ | ಹೆಚ್‌ಆರ್‌ಎ | ಸಿಸಿಎ | ಇತರೆ ಭತ್ಯೆಗಳು (ತುಟ್ಟಿಭತ್ಯೆ ಹೊರತುಪಡಿಸಿ) | ಒಟ್ಟು |
|---|---|---|---|---|---|---|---|---|---|---|
| 1 | ಮೇ 2018 | 2401–00–001–1–01 | ಪ್ರ.ದ.ಸ. | 15 | 12500–24000 | 187500 | 56250 | 5250 | 3000 | 252000 |
| 2 | | | ದ್ವಿ.ದ.ಸ. | 20 | 11600–21000 | 232000 | 69600 | 7000 | 4000 | 312600 |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |

**GOVERNMENT OF KARNATAKA**

No. FD 11 BPE 2017

Karnataka Government Secretariat,
Vidhana Soudha,
Bangalore, dated 13.10.2017.

**CIRCULAR**

**Sub: Appendix-B - Salary Estimates for 2018-19**

***

1. METHOD OF ESTIMATION :
   a. Salary estimation for Appendix B is being done by porting the working strength data of HRMS from the FY 2015-16 However, the information pertaining to Sanctioned Posts are being obtained from the concerned Heads of Department using the Organogram module of HRMS from the last two years.
   b. For the FY 2018-19 too, Finance Department would be making use of only the Sanctioned strength data captured through Organogram Module to estimate Appendix-B and no manual information will be sought from departments. Hence, it is pertinent to note that any inconsistency or lapse on the part of the Head of the Department would result in under provision of Salaries.
2. ROLE OF ADMINISTRATIVE DEPARTMENTS
   a. The Estimating Officers are required to update the information on sanctioned strength compulsorily on the HRMS platform.
   b. Use the internet browser to enter URL 'hrmsorg' . Login with HOD credentials already provided to respective departments. Once the login is successful, the respective department name will appear at the top of the page. After selecting the department, the payscale wise sanctioned strength data as was entered by departments during 2017-18 will appear on the screen.
   c. The Estimating officer is then requested to check whether the **sanctioned strength data** so displayed is correct and may be

used for estimating Appendix-B for FY 2018-19. If so, a certification regarding the same, signed by the Head of the Department must be submitted to Finance Department.

d. If the data so displayed has undergone any change due to creation/abolition/upgrading/downgrading/shifting etc. of posts, then suitable corrections must be made on the portal and thereafter certificates to that effect must be signed by the Head of the Department and submitted to the Finance Department.

e. Once the Head of the Department is confident that the data entry is complete in all respects and that the verification has been done to his/her full satisfaction, he/she has to generate a Certificate from HRMS, sign it and send it to the Finance Department as detailed in the above steps. **Only this System- Generated and Signed Report will be treated as authenticated and will be accepted and made use of by FD for all its Posts & Salary related projections / analysis for** 2018-19**. The last date for submitting the certificate is 30/11/2017**

f. **Heads of Departments** are solely responsible for the completeness and correctness of Data entered in HRMS in both **State & District Sectors.** They shall be responsible for coordinating with CEOs and CAOs of Zilla Panchayats to collect and consolidate the data and complete the data entry in respect of Schemes coming under their jurisdiction with the help of the Nodal Officer of HRMS appointed in each Department.

g. As Finance Department will solely be depending on HRMS data for projecting the Salary for 2018-19, utmost diligence and care should be exercised at the time of data entry and its verification.

h. The list of schemes that were **not a part** of HRMS in FY 2017-18 are given in **Annexure-1.** Concerned Heads of Departments shall ensure that those Institutions coming under their jurisdiction are all on HRMS **platform before 30th Nov 2017.**

i. **The departments shall make sure that the contract and daily wage employees are not entered in HRMS. Separate estimates under Object Head 034 (for Contract/outsource Employees), under Object Head 033 (for Daily Wage Employees) and for outsource employees working in grant in aid institutions under Object Head 115 shall be intimated by the respective departments while sending the expenditure estimates.**

3. ROLE OF FINANCE DEPARTMENT AND HRMS:
   - **a. The Finance Department will be porting updated Sanctioned-strength data directly from the HRMS platform.**
   - **b.** Any practical/technical problem/issues that may be encountered at the time of data entry or at a later stage shall be brought to the notice of the Project Officer, HRMS, Centre for e-Governance, immediately without any delay. He can be contacted on Phone: 22372410 and email: pohrms-ceg@karnataka.gov.in. The issue shall also be brought to the notice of Special Officer (Budget) through email: spobud-fd@karnataka.gov.in.
4. METHOD FOR ESTIMATING REQUIREMENT FOR POSTS UNDER RECRUITMENT:

   In case of certain Departments, vacancies may be filled up during 2018-19 based on recruitments already done or that are underway. Since increase in working strength during the course of 2018-19 will have financial implications, HoDs of such Departments who foresee filling up of vacancies during 2018-19, should furnish information as per **Annexure-2** to Finance Department before **30th December 2017.**

5. This Circular along with the Annexure are available on the website ***www.finance.kar.nic.in***

**(RITVIK PANDEY)**
Secretary to Government,
Finance Department ( B& R)

**TO:**

1. The Principal Accountant General (A & E) / (G&SSA) / (E&RSA), Karnataka, Bangalore.
2. All the Principal Secretaries and Secretaries to Government.
3. All the Regional Commissioners.
4. All the Deputy Commissioners.
5. All the Chief Executive Officers of Zilla Panchayaths.
6. All the Heads of Departments.
7. All the Internal Financial Advisors
8. All Addl. Secretaries/ Joint Secretaries/Deputy Secretaries/Under Secretaries/ Section Officers in Finance Department.
9. Office Copies/Additional Copies.

# Annexure-1

**Outside HRMS 2017-18**

| SECTOR | DEMAND | HOA | HOA Description |
|---|---|---|---|
| State | Department of Personnel & Administrative Reforms | 2014-00-102-0-01 | Judges |
| State | Department of Personnel & Administrative Reforms | 2014-00-116-2-00 | KAT-Kalaburagi |
| State | Department of Personnel & Administrative Reforms | 2014-00-116-3-00 | KAT-Belagavi |
| State | Department of Personnel & Administrative Reforms | 2051-00-102-0-01 | Chairman & Members |
| State | Revenue | 2053-00-093-1-07 | Special Court under Karnataka Land Grabbing Prohibition Act 2011 |
| State | Agriculture & Horticulture | 2401-00-114-0-01 | National Mission for Oil Seeds and Oil Palm |
| State | Revenue | 2506-00-012-0-03 | UPOR Project |
| District | Social Welfare | 2225-00-101-0-82 | Residential Schools Transferred From Education Department |
| District | Social Welfare | 2225-00-103-0-53 | Maintenance of Tailoring Training Centres |
| District | Women & Child Development | 2235-00-101-0-28 | Non Government Institutions for Physically Handicapped |
| District | Women & Child Development | 2235-00-101-0-30 | Voluntary Organisation for Care of the Old Infirm & Diseased |
| District | AH & F | 2405-00-101-0-28 | Assistance to Inland Fisheries Development |
| District | Water Resource | 2702-00-101-0-27 | Survey |

| Annexure-2 | | | | | | | | | | |
|---|---|---|---|---|---|---|---|---|---|---|
| Illustrative Examples | | | | | | | | | | |
| **Sl.No** | **Month of Recruitment /Joining** | **HOA under which Salary to be Drawn** | **Officers with Designation** | **Nos.** | **Pay Scale(Min-Max)** | **Basic Pay** | **HRA** | **CCA** | **Other Allowances (Except DA)** | **Total** |
| 1 | May-18 | XXXX-XX-XXX-X-XX | Assistant Director of Agriculture | 5 | 20000-36300 | 100000 | 30000 | 2000 | 2000 | **134000** |
| 2 | May-18 | XXXX-XX-XXX-X-XX | Agriculture Officer | 10 | 19000-34500 | 190000 | 57000 | 2000 | 5000 | **254000** |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |
| **Sl.No** | **Month of Recruitment /Joining** | **HOA under which Salary to be Drawn** | **Officers with Designation** | **Nos.** | **Pay Scale(Min-Max)** | **Basic Pay** | **HRA** | **CCA** | **Other Allowences (Except DA)** | **Total** |
| 1 | May-18 | XXXX-XX-XXX-X-XX | First Division Assistant | 15 | 12500-24000 | 187500 | 56250 | 5250 | 3000 | **252000** |
| 2 | | | Second Division Assistant | 20 | 11600-21000 | 232000 | 69600 | 7000 | 4000 | **312600** |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |